ಬಂದಾಗ ಕೊಳ್ಳುತ್ತಿದ್ದ ಪದ್ಮಕ್ಕ ಜಾಸ್ತಿ ಹುಣಸೆಹುಳಿ ಹಾಕಿ ಹದವಾದ ಸಾರು ಮಾಡುತ್ತಿದ್ದರು. ಅವರ ಅಡಿಗೆಯನ್ನು ಸುಂದರವಾದ ಪದಗಳಲ್ಲಿ ವರ್ಣನೆ ಮಾಡುತ್ತಿದ್ದ ನಾವು ಹೇಗಾದರೂ ಮಾಡಿ ಮೀನಿನ ಸಾರನ್ನು ಗಿಟ್ಟಿಸಿಕೊಳ್ಳುತ್ತಿದ್ದೆವು. ನಮಗಿಬ್ಬರಿಗೂ ಆ ಮೀನುಗಳನ್ನು ಕೊಂಡುಕೊಂಡು ಕ್ಲೀನ್ ಮಾಡಿ ಸಾರು ಮಾಡಿಕೊಳ್ಳುವಷ್ಟು ಪುರುಸೊತ್ತು ಇರಲಿಲ್ಲ. ಶ್ರಾವಣದ ಸಮಯದಲ್ಲಿ ತಿಂಗಳುಗಟ್ಟಲೆ ಪದ್ಮಕ್ಕ ನಾನ್ವೆಜ್ ಮಾಡುತ್ತಿರಲಿಲ್ಲ. ಆ ತಿಂಗಳೆಲ್ಲಾ ನಾಲಿಗೆಯ ಹದವನ್ನು ಕಳೆದುಕೊಂಡಿದ್ದ ನಾವು ಶ್ರಾವಣ ಮುಗಿಯುವುದನ್ನೇ ಕಾಯುತ್ತಿದ್ದೆವು.

ಈ ಮಾಸ ಮುಗಿದ ಕೂಡಲೇ ನಾವೇ ಡ್ಯಾಮಿಗೆ ಹೋಗಿ ಭಾರಿ ಗಾತ್ರದ ಎರಡು ಮೀನುಗಳನ್ನು ತಂದು ಪದ್ಮಕ್ಕನಿಗೆ ಕೊಟ್ಟು ಸಾರು ಮಾಡಲು ಹೇಳಿದೆವು. ಗಂಡನ ಜೊತೆ ದಿನವೂ ಗಾರೆ ಕೆಲಸಕ್ಕೆ ಹೋಗುತ್ತಿದ್ದ ಪದ್ಮಕ್ಕ, “ನಾನು ಸಾರು, ಅನ್ನ ಮಾಡಿಟ್ಟು ಹೋಗ್ತೀನಿ. ನೀವಿಬ್ಬರು ಮಧ್ಯಾಹ್ನ ಬಂದು ತಿನ್ನಿ. ಮನೆ ಬೀಗ ಕಿಟಕೀಲಿ ಇಟ್ಟಿರ್ತೀನಿ” ಎಂದು ಹೇಳಿದರು. ಬೆಳಿಗ್ಗೆ ಎದ್ದು ಮೀನು ತರಲು ಹೋದ ನಮ್ಮಿಬ್ಬರಿಗೆ ಅವತ್ತು ತಿಂಡಿ ಮಾಡಿಕೊಂಡು ತಿನ್ನಲೂ ಪುರುಸೊತ್ತು ಇರಲಿಲ್ಲ. ಕ್ಲಾಸಿಗೆ ಬೇರೆ ಟೈಮಾಗಿತ್ತು. “ಹೇಗೂ ಮಧ್ಯಾಹ್ನಕ್ಕೆ ಭಾರಿ ಭೋಜನವೇ ಇರುತ್ತಲ್ಲ. ಆಗ ಚೆನ್ನಾಗಿ ಕತ್ತರಿಸೋಣ” ಎಂದು ಜೊಲ್ಲು ಸುರಿಸಿಕೊಂಡು ವಿಶ್ವವಿದ್ಯಾಲಯಕ್ಕೆ ಹೋದೆವು. ಬರುವಾಗ ಮೂರು ಗಂಟೆ ದಾಟಿತ್ತು. ಹೊಟ್ಟೆಯಲ್ಲಿನ ಕರಳುಗಳು ಕೆಲಸವಿಲ್ಲದೆ ತಕಪಕ ಕುಣಿಯುತ್ತಿದ್ದವು. ಮೀನುಗಳನ್ನು ಸಖತ್ತಾಗಿ ಬಾರಿಸೋಣ ಎಂದು ಕೈಕಾಲು ಮುಖ ತೊಳೆದುಕೊಳ್ಳಲು ನಾನು ಬಚ್ಚಲಿಗೆ ಹೋದೆ. ಪಕ್ಕದ ಮನೆಯಿಂದ ಪಾತ್ರೆಗಳನ್ನು ಎತ್ತಿಕೊಂಡು ಬರುತ್ತೇನೆಂದು ಮಲ್ಲಿಕಾರ್ಜುನ ಕಬ್ಬೂರು ಲಗುಬಗೆಯಿಂದ ಓಡಿಹೋದ.

ಹೋದವನು ಕೆಲವೇ ನಿಮಿಷಗಳಲ್ಲಿ, “ಕಲೀಮ ಬಾರಲೇ ಇಲ್ಲಿ” ಎಂದು ಆತಂಕದಿಂದ ಕಿರುಚಿಕೊಂಡ. ಏನು ಅನಾಹುತವಾಗಿದೆಯೋ, ಏನೋ? ಎಂದು ನಾನು ಓಡಿದೆ. ನಮ್ಮ ರೂಮಿನ ಹಿಂದೆ ಭತ್ತದ ಗದ್ದೆಗಳಿದ್ದವು. ಅಲ್ಲಿಂದ ಕೆಲವು ಸಲ ಕಪ್ಪೆಯ ಶಿಕಾರಿಗೆಂದು ಬರುವ ಹಾವುಗಳು ಮನೆಯ ಒಳಗೂ ಬಂದು ಬಿಡುತ್ತಿದ್ದವು. ಹಾವು ಕಂಡರೆ ಹೆದರುವ ಮಲ್ಲಿಕ ಹೀಗೆ ಕೂಗಿಕೊಂಡಿರಬಹುದೆಂದು ಊಹಿಸಿಕೊಂಡೆ. ಹೋಗಿ ನೋಡಿದಾಗ ಪದ್ಮಕ್ಕನ ಅಡಿಗೆ ಪಾತ್ರೆಗಳ ಮುಂದೆ ಕಬ್ಬೂರು ಬಾಯಿಬಿಟ್ಟುಕೊಂಡು ನಿಂತಿದ್ದ. ಅನ್ನ ಹಾಗೂ ಸಾರಿನ ಪಾತ್ರೆಗಳೆರಡೂ ಖಾಲಿ ಹೊಡೆಯುತ್ತಿದ್ದವು. ಮೂಸಿ ನೋಡಿದರೆ ತಳದಿಂದ ಮೀನು ಸಾರಿನ ವಾಸನೆ ಕ್ಷೀಣವಾಗಿ ಬರುತ್ತಿತ್ತು. ನೆಲದ ಮೇಲೆ ಉರುಳಿದ ಅನ್ನ ಸಾರನ್ನು ಯಾರೋ ನೆಕ್ಕಿ ಹೋಗಿದ್ದು ಸ್ಪಷ್ಟವಾಗಿ ಕಾಣುತ್ತಿತ್ತು.

ಆಗಿದ್ದ ಅನಾಹುತ ಏನೆಂದರೆ, ಅನ್ನ ಸಾರು ಮಾಡಿಟ್ಟ ಪದ್ಮಕ್ಕ ಮನೆಯ ಹಿತ್ತಲ ಕದವನ್ನು ಗಡಿಬಿಡಿಯಲ್ಲಿ ಹಾಕುವುದನ್ನು ಮರೆತು ಹೋಗಿದ್ದರು. ಈ ಅವಕಾಶ ಸಿಕ್ಕ ನಾಯಿಗಳೆರಡು ಗಡದ್ದಾಗಿ ಬಂದು ಮೀನಿನ ಭೋಜನವನ್ನು ಸವಿದು ಹೋಗಿದ್ದವು. ಬೇಜಬ್ದಾರಿಯಿಂದ ಕದವನ್ನು ಭದ್ರಪಡಿಸದೆ ಹೋದ ಪದ್ಮಕ್ಕನನ್ನೂ, ಸೇಡು ತೀರಿಸಿಕೊಳ್ಳುವಂತೆ ನಮ್ಮ ಪಾಲಿನ ಊಟವನ್ನು ಚಪ್ಪರಿಸಿ ಹೋದ ನಾಯಿಗಳೆರಡನ್ನೂ ಮಲ್ಲಿಕಾರ್ಜುನ ವಾಚಾಮಗೋಚರವಾಗಿ ಬೈದ. ಹಸಿವಿನಿಂದ ಕಂಗೆಟ್ಟು ಬಂದಿದ್ದ ಅವನ ಮುಖದಲ್ಲಿ ಸಿಟ್ಟು ರುದ್ರ ತಾಂಡವವಾಗಿ ಕುಣಿಯುತ್ತಿತ್ತು. ಹಸಿವನ್ನು ಸಹಿಸಿಕೊಳ್ಳುವ ಶಕ್ತಿ ಕಮ್ಮಿಯಿದ್ದ ಅವನನ್ನು ಅವತ್ತು ಸಮಾಧಾನಪಡಿಸುವುದು ಸಾಧ್ಯವಿಲ್ಲದ ಮಾತಾಗಿತ್ತು.

“ಲೇ ಕಲೀಮ ಬಾರ್ಲೆ, ಆ ಲೌಡಿಗಂಡನವು ನಾಯಿಗಳು ಎಲ್ಲಿದ್ರೂ ಬಿಡಬಾರ್ದು.